ಆರಂಭಿಕ ಭಾಷೆ ಮತ್ತು ಸಾಕ್ಷರತೆಯ ಕಲಿಕೆ | ಪ್ರಸ್ತುತತೆಯ ಪ್ರಶ್ನೆ

ಶೈಲಾಜಾ ಮೆನನ್

ಭಾರತದ ಶಾಲೆಗಳಲ್ಲಿ ಕಗ್ಗಂಟಿನ ಸಮಸ್ಯೆಯೊಂದಿದೆ. ಅದೇನೆಂದರೆ ನಮ್ಮ ತರಗತಿಗಳಿಗೆ ಕುತೂಹಲ ಹೊಂದಿರುವ, ಚುರುಕಿನ ಮತ್ತು ಸಾಮಾಜಿಕವಾಗಿ ಸಮರ್ಥವಾಗಿರುವ ಮಕ್ಕಳು ಪ್ರತಿವರ್ಷ ಬರುತ್ತಾರೆ. ಅವರಿಗೆ ಸದ್ಯ ಇರುವ ಕಲಿಕಾ ವಿಧಾನದಿಂದ ಬೋಧಿಸಲು ಪ್ರಯತ್ನಿಸುತ್ತೇವಾದರೂ, ಆ ಕ್ರಮದಿಂದಾಗಿಯೇ ದೊಡ್ಡ ಸಂಖ್ಯೆಯಲ್ಲಿ ಈ ಮಕ್ಕಳು ಶಾಲಾ ಶಿಕ್ಷಣದ ಮೊದಲ ಮೂರು ವರ್ಷಗಳೊಳಗೆ ಕಲಿಯುವ 'ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಕಳೆದ ಹಲವು ವರ್ಷಗಳಲ್ಲಿ ನಮ್ಮ ದೇಶದಲ್ಲಿ ನಡೆಸಿದ ದೊಡ್ಡ ಪ್ರಮಾಣದ ಮೌಲ್ಯಮಾಪನವೊಂದು ಹಲವಾರು ಮಕ್ಕಳು ಮೇಲಿನ ತರಗತಿಗಳಿಗೆ ಹೋಗಿದ್ದರೂ ಪ್ರಾಥಮಿಕ ಮಟ್ಟದಲ್ಲಿ ಓದಲು ಅಥವಾ ಬರೆಯಲು ಅಸಮರ್ಥರು ಎಂಬುದನ್ನು ತೋರಿಸಿರುವುದು ಆಶ್ಚರ್ಯವೆನಿಸುವುದಿಲ್ಲವೇ? ಖ್ಯಾತ ಭಾಷಾ ಮನೋವಿಜ್ಞಾನಿ ಜಿಮ್ ಗೀಯವರು ಅಮೆರಿಕಾದ ಶಾಲೆಗಳಲ್ಲಿ ಈ ಅಸಂಬದ್ಧತೆಯು ನಿಯಮಿತವಾಗಿ ನಡೆಯುತ್ತದೆ ಎಂಬುದನ್ನು ಸೂಚಿಸಿದ್ದಾರೆ. ಉದಾಹರಣೆಗೆ, ಇಂಗ್ಲಿಷ್ ವರ್ಣಮಾಲೆಯ ಇಪ್ಪತ್ತಾರು ಅಕ್ಷರಗಳನ್ನು ಮತ್ತು ಅದನ್ನು ಓದುವಾಗ ಅನ್ವಯಿಸುವ ಅದರ ನಿಯಮಗಳನ್ನು ಚೆನ್ನಾಗಿ ಕಲಿಯಲು ವರ್ಷಗಳೇ ತೆಗೆದು-ಕೊಂಡರೂ, ಅವರಿಗೆ ಆಡಲು ವಿಡಿಯೋ ಗೇಮ್‌ಗಳನ್ನು ನೀಡಿದಲ್ಲಿ ಕೆಲವೇ ವಾರಗಳಲ್ಲಿ ನೂರಾರು ಅಮೂರ್ತ ಚಿಹ್ನೆಗಳು ಮತ್ತು ನಿಯಮಗಳನ್ನು ಕಲಿಯುತ್ತಾರೆ ಎಂಬುದಾಗಿ ತಿಳಿಸಿದ್ದಾರೆ.

ಇದು ನನಗೆ ಗೀತಾ[i] ಎಂಬ 9 ವರ್ಷದ ಹುಡುಗಿಯ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಭಾರತೀಯ ಭಾಷೆಗಳು (LiRIL)[ii] ಅಧ್ಯಯನದಲ್ಲಿ ಸಾಕ್ಷರತಾ ಸಂಶೋಧನೆಯನ್ನು ನಡೆಸುವಾಗ ನಾನು ಅವಳನ್ನು ಭೇಟಿಯಾದೆ. ಅವಳು ಮಹಾರಾಷ್ಟ್ರದ ವರ್ಲಿ ಬುಡಕಟ್ಟು ಜನಾಂಗಕ್ಕೆ ಸೇರಿದವಳು. ನಾನು ಅವಳನ್ನು ಭೇಟಿಯಾದಾಗ ಅವಳು ಹಳ್ಳಿಯ ಶಾಲೆಯಲ್ಲಿ ನಾಲ್ಕನೇ ತರಗತಿಯನ್ನು ಓದುತ್ತಿದ್ದಳು. ಅವಳಿಗೆ ಶಾಲೆಯಲ್ಲಿನ ಭಾಷೆಯಾದ ಮರಾಠಿಯಲ್ಲಿ ಮಾತನಾಡಲು ಮತ್ತು ಅರ್ಥಮಾಡಿಕೊಳ್ಳಲು ಬರುತ್ತಿತ್ತು. ಅವಳು ಬಹಳ ಚುರುಕಿನ, ಸಮರ್ಥ, ಜಾಗರೂಕ ಹುಡುಗಿ. ತನ್ನ ತಂದೆತಾಯಿ ಕೆಲಸಕ್ಕೆ ಹೋದಾಗ ಅವಳು ಒಡಹುಟ್ಟಿದ ತನ್ನ ಇಬ್ಬರು ಪುಟ್ಟ ಸಹೋದರರ ಆರೈಕೆ ಮಾಡುತ್ತಿದ್ದಳು. ಅವಳು ಸಂಶೋಧಕರಿಗೆ ಬಹಳ ಕುತೂಹಲದಿಂದ ಹಲವಾರು ಪ್ರಶ್ನೆಗಳನ್ನು ಕೇಳುತ್ತಿದ್ದಳು. ಎಷ್ಟೋ ವಿಷಯಗಳ ಬಗ್ಗೆ ವಿಚಾರಿಸುತ್ತಿದ್ದಳು. ಅಲ್ಲದೆ, ಸಂಶೋಧಕರು ಕೇಳುವ ಎಷ್ಟೋ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಳು, ವಿವರ ನೀಡುತ್ತಿದ್ದಳು. ಯಾರು ಅಲ್ಲಿ ವಾಸವಾಗಿದ್ದಾರೆ, ಆ ಸ್ಥಳಕ್ಕೆ ಯಾವುದು ಹತ್ತಿರದ ದಾರಿ, ಏನೂ ಇಲ್ಲದಾಗ ತಿನ್ನಲು ಯಾವ ಹಣ್ಣುಗಳು ಮತ್ತು ಬೇರುಗಳು ಸುರಕ್ಷಿತ, ನೀರನ್ನು ಕುಡಿಯಲು ಯೋಗ್ಯವಾಗಿ ಮಾಡಲು ಹೇಗೆ ಶೋಧಿಸ-ಬೇಕು. ಹೀಗೆ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದಳು! ಅವಳು ಪ್ರಶ್ನೆಗಳು ಮತ್ತು ಮಾಹಿತಿಯ ಭಂಡಾರವಾಗಿದ್ದಳು. ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದಳು, ಒಳ್ಳೆಯ ಕೆಲಸಗಾರ್ತಿ, ಶ್ರಮಜೀವಿ, ಕಷ್ಟಪಟ್ಟು ದುಡಿಯುತ್ತಿದ್ದಳು. ಅಡುಗೆ ಮಾಡಲು, ಪಾತ್ರೆ ತೊಳೆಯಲು ಹೀಗೆ ಮನೆಯ ಹತ್ತು ಹಲವಾರು ಕೆಲಸಗಳಲ್ಲಿ ಅಮ್ಮನ ಜೊತೆ ಕೈಜೋಡಿಸುತ್ತಿದ್ದಳು. ಅವಳು ಸೋಮಾರಿಯಾಗಿರಲಿಲ್ಲ. ನಿರ್ಲಿಪ್ತಳೂ ಅಲ್ಲ, ಮಂಕಾಗಿರುವವಳೂ ಅಲ್ಲ. ಆದರೂ ಮೂರುವರೆ ವರ್ಷಗಳ ಕಾಲ ಔಪಚಾರಿಕ ಶಿಕ್ಷಣವನ್ನು ಮುಗಿಸಿಯೂ ಕೂಡ ಅವಳಿಗೆ ಚೆನ್ನಾಗಿ ಓದಲು, ಬರೆಯಲು ಬರುತ್ತಿರಲಿಲ್ಲ.

ದೇಶದ ಹಲವೆಡೆ ನಾನು ತರಗತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದಾಗ ಗೀತಾಳಂತಹ ಹಲವಾರು ಹುಡುಗ ಹುಡುಗಿಯರನ್ನು ನಾನು ಭೇಟಿ ಮಾಡಿದ್ದೇನೆ. ಯಾಕೆ ಹೀಗಾಗುತ್ತಿದೆ?

ನಾವೆಲ್ಲಿ ಎಡವುತ್ತಿದ್ದೇವೆ?

ಸಹಜವಾದ ಬುದ್ಧಿವಂತಿಕೆ, ಕುತೂಹಲ, ತಲ್ಲೀನತೆಗಳೊಂದಿಗೆ ತರಗತಿಗಳನ್ನು ಪ್ರವೇಶಿಸುವ ಮಕ್ಕಳ ನೈಜ ಸಂಪರ್ಕವನ್ನು ಶಿಕ್ಷಕರಾದ ನಾವು ಕಳೆದುಕೊಳ್ಳುತ್ತಿದ್ದೇವೆ ಮತ್ತು ಬಹಳ ಪ್ರಸ್ತುತವಲ್ಲದ ಕಲಿಕೆ ಅಥವಾ ಅವರಿಗೆ ಕೈಗೆಟುಕದ ಕಲಿಕೆಯನ್ನು ಒದಗಿಸುತ್ತಿದ್ದೇವೆ ಎನ್ನುವುದು ಸ್ಪಷ್ಟ. ಗೀತಾಳಂತಹ ಮಕ್ಕಳನ್ನು ಗಮನದಲ್ಲಿರಿಸಿ, ಈ ಲೇಖನದಲ್ಲಿ ನಾನು ಆರಂಭಿಕ ಭಾಷಾ ತರಗತಿಗಳಲ್ಲಿ ಭಿನ್ನವಾಗಿ ಮಾಡಬಹುದಾದ ಮೂರು ನಿರ್ದಿಷ್ಟ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದೇನೆ.

1. ಬಹುಭಾಷಾ ಪರಿಸರವನ್ನು ರೂಪಿಸುವುದು
2. ಭಾಷಾ ಕಲಿಕೆಯಲ್ಲಿ ಮಕ್ಕಳ ಪ್ರಾರಂಭಿಕ ಪ್ರಯತ್ನಗಳನ್ನು ಪ್ರೋತ್ಸಾಹಿಸುವುದು.
3. ಭಾಷಾ ತರಗತಿಯ ಪಾಠವು ಅರ್ಥಪೂರ್ಣವಾಗುವಂತೆ ಮಾಡುವುದು.

ಬಹುಭಾಷಾ ಪರಿಸರವನ್ನು ನಿರ್ಮಿಸುವುದು

ಭಾಷಾ ತರಗತಿಗೆ ಸಣ್ಣ ಮಕ್ಕಳು ತಾವು ಆಲೋಚಿಸುವ, ತರ್ಕಿಸುವ, ಪರಿಶೋಧಿಸುವ, ವಾದಿಸುವ, ವರ್ಣಿಸುವ ಮತ್ತು ಸಂಪರ್ಕ ಸಾಧಿಸುವ ತಮ್ಮ ಮನೆ ಭಾಷೆಗಳ ವಿಫುಲ ಅದ್ಭುತವಾದ ಸಂಪನ್ಮೂಲದೊಂದಿಗೆ ಭಾಷಾ ಕೌಶಲದೊಂದಿಗೆ ಶಾಲೆಗೆ ಬರುತ್ತಾರೆ. ಅದು ಅವರ ಸಂಬಂಧಗಳ ಭಾಷೆ, ಭಾವನೆಗಳ ಭಾಷೆಯಾಗಿರುತ್ತದೆ. ಅವರಿಗೆ ಆ ಭಾಷೆಯಲ್ಲಿ ಮೂಲ ವ್ಯಾಕರಣದ ಅರಿವಿರುತ್ತದೆ ಮತ್ತು ಸಾಕಷ್ಟು ಪ್ರಮಾಣದಲ್ಲಿ ಅದರ ಶಬ್ದಗಳು ತಿಳಿದಿರುತ್ತದೆ.

ಆದರೆ ಹಲವಾರು ಸಂದರ್ಭಗಳಲ್ಲಿ ತರಗತಿಯ ಒಳಗೆ ಬರುವಾಗ ಚಪ್ಪಲಿಗಳನ್ನು ಹೊರಗೆ ಬಿಟ್ಟು ಬರುವಂತೆ ತಮ್ಮ ಮನೆ ಭಾಷೆಯನ್ನು ತರಗತಿಯ ಹೊರಗೆ ಬಿಟ್ಟು ಬರಬೇಕು ಎನ್ನುವಂತೆ ಶಾಲೆಯ ವಾತಾವರಣ ಇರುತ್ತದೆ. ಆದರ್ಶಪ್ರಾಯವಾಗಿ ಮಗುವಿನ ಮಾತೃಭಾಷೆಯು ಬೋಧನೆಯ ಮಾಧ್ಯಮವಾಗಬೇಕು (ಕಮ್ಮಿನ್ಸ್ 2001). ಇದು ಮಗುವಿಗೆ ಏನು ಕಲಿಸಲಾಗುತ್ತಿದೆ ಎಂಬ

ವಿಷಯವನ್ನು ಅರಿಯಲು ಮಾತ್ರವಲ್ಲದೆ, ತನ್ನ ಭಾವನೆಗಳನ್ನು ಮತ್ತು ವಿಚಾರಗಳನ್ನು ವ್ಯಕ್ತಪಡಿಸಲು, ಹಾಗೆಯೇ ತನ್ನ ಸಾಂಸ್ಕೃತಿಕ ಗುರುತು ಹಾಗೂ ಪರಂಪರೆಯ ಬಗ್ಗೆ ಹೆಮ್ಮೆ ಅಥವಾ ಅಭಿಮಾನಪಡಲು ನೆರವಾಗುತ್ತದೆ. ಮಾತೃಭಾಷೆಯಲ್ಲಿ ಕಲಿಸುವುದೆಂದರೆ ತಮ್ಮ ಮಕ್ಕಳ ಮಾತೃಭಾಷೆಗೆ ಮಾತ್ರ ಸೀಮಿತವಾಗಬೇಕಿಲ್ಲ. ಮಗುವಿನ ಮನೆ ಭಾಷೆಯನ್ನು ಅಂಗೀಕರಿಸಿದ್ದರೂ ಕೂಡ ಶಾಲಾ ಭಾಷೆ, ಇಂಗ್ಲಿಷ್ ಮತ್ತು ಸುತ್ತಮುತ್ತಲಿನ ಇತರೆ ಭಾಷೆಗಳನ್ನೂ ಕೂಡ ಕಲಿಸಬಹುದು.

ಆದರೆ ಹಲವಾರು ಕಾರಣಗಳಿಂದಾಗಿ ಭಾರತದಾದ್ಯಂತದ ಅನೇಕ ಶಾಲೆಗಳಲ್ಲಿ ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ ಕಲಿಸಲಾಗುತ್ತಿಲ್ಲ. ಭಾರತೀಯ ಶಾಲೆಗಳ ನಾಲ್ಕು ಮಕ್ಕಳಲ್ಲಿ ಒಬ್ಬರು ತಮ್ಮ ಮನೆ ಮತ್ತು ಶಾಲಾ ಭಾಷೆ ಒಂದೇ ಆಗಿರದ ಕಾರಣ ಸಾಧಾರಣದಿಂದ ತೀವ್ರ ಕಲಿಕಾ ಸಮಸ್ಯೆ ಎದುರಿಸುತ್ತಾರೆ. ಕಲಿಕಾ ಮಾಧ್ಯಮದ ಕುರಿತ ನಿರ್ಧಾರ ವೈಯಕ್ತಿಕ ಶಿಕ್ಷಕರ ಕೈಯಲ್ಲಿ ಇರುವುದಿಲ್ಲ. ಆದರೆ ಒಂದೇ ತರಗತಿಯಲ್ಲಿ ಹಲವಾರು ಮಾತೃಭಾಷೆಗಳನ್ನು ಬಳಸಬಹುದು. ಅಧಿಕೃತವಾದ ಕಲಿಕಾ ಮಾಧ್ಯಮಕ್ಕೆ ಭಿನ್ನವಾಗಿ ಹಲವು ಭಾಷೆಗಳನ್ನು ಮಾತನಾಡಬಲ್ಲ ವಿದ್ಯಾರ್ಥಿಗಳಿರುವ ಶಾಲೆಯಲ್ಲೂ ಕೂಡ ಮಕ್ಕಳಿಗೆ ಆರಾಮವೆನಿಸುವ ರೀತಿಯಲ್ಲಿ ಮಾಡಬಹುದಾದ ಹಲವಾರು ಸರಳ ಮಾರ್ಗಗಳಿವೆ. ಆ ಕೆಲವನ್ನು ಇಲ್ಲಿ ಪಟ್ಟಿಮಾಡಲಾಗಿದೆ.[iii]

ತರಗತಿಯಲ್ಲಿ ಬಹುಭಾಷಾ ಚಿತ್ರಗಳನ್ನು ಬಳಸುವುದು

ತರಗತಿಯಲ್ಲಿ ಹಲವು ಭಾಷೆಗಳ ಮುದ್ರಿತ ಸಾಮಗ್ರಿಗಳನ್ನು ಪ್ರದರ್ಶಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಇವು ತರಗತಿಯ ವಿವಿಧ ಭಾಗಗಳಲ್ಲಿ ಲೇಬಲ್ ಗಳನ್ನು ಒಳಗೊಂಡಂತೆ ಪುಸ್ತಕಗಳು, ಕತೆಗಳು, ಪದ್ಯಗಳು ಇತ್ಯಾದಿಗಳಿರ-ಬಹುದು. ಇದು ಮಕ್ಕಳು ಚೆನ್ನಾಗಿ ಅರಿಯಲು ಸಹಾಯ ಮಾಡುವುದಲ್ಲದೆ ತಮ್ಮ ಭಾಷೆಗೂ ಬೆಲೆಯಿದೆ, ಅದು ಅಂಗೀಕಾರವಾಗಿದೆ ಎಂಬ ಭಾವನೆ ಅವರಲ್ಲಿ ಬರಲು ನೆರವಾಗುತ್ತದೆ. ಒಂದು ವೇಳೆ ಸ್ಥಳೀಯ ಭಾಷೆಗೆ ಲಿಪಿಯಿಲ್ಲದಿದ್ದರೆ ಆ ಭಾಷೆಯ ಕತೆಗಳು, ಹಾಡುಗಳು ಮತ್ತು ಪದ್ಯಗಳನ್ನು ಪ್ರಾದೇಶಿಕ ಭಾಷೆಯ ಲಿಪಿಯಲ್ಲಿ (ಬೋಧನಾ ಮಾಧ್ಯಮ) ಬರೆದು ತರಗತಿಯಲ್ಲಿ ಪ್ರದರ್ಶಿಸಬಹುದು.

ಮನೆಭಾಷೆಯಲ್ಲಿ ಮಾತನಾಡಲು ಮತ್ತು ಅಭಿವ್ಯಕ್ತಿಸಲು ಪ್ರೋತ್ಸಾಹಿಸುವುದು

ಚಿಕ್ಕಮಕ್ಕಳಿಗೆ ತಮ್ಮ ಮನೆಭಾಷೆಯಲ್ಲಿ ಮಾತನಾಡಲು ಅನುವು ಮಾಡಿದರೆ ಅವರು ಸಕ್ರಿಯವಾಗಿ ಬೆರೆತು ಇನ್ನಷ್ಟು ಹೆಚ್ಚು ಮಾತನಾಡುತ್ತಾರೆ. ಶಿಕ್ಷಕರಿಗೆ ಮಗುವಿನ ಈ ಭಾಷೆ ಗೊತ್ತಿದ್ದರೆ ಅವರು ಮಗುವಿನ ಜೊತೆ ಆ ಭಾಷೆಯಲ್ಲಿಯೇ ಉತ್ತರಿಸಬಹುದು. ಇಲ್ಲದಿದ್ದಲ್ಲಿ ಒಬ್ಬ ಮಧ್ಯವರ್ತಿಯನ್ನು (ಹಿರಿಯ ಅಥವಾ ಹಳೆಯ ವಿದ್ಯಾರ್ಥಿ, ಸಮುದಾಯ ಸದಸ್ಯ, ಸಹಪಾಠಿ) ಗುರುತಿಸಿ ಆ ಮಗುವಿನ ಜೊತೆಗೆ ಮಾತನಾಡಲು ಶಿಕ್ಷಕರು ನೆರವು ಪಡೆಯಬಹುದು.

ಮಾತನಾಡುವಾಗ ಮತ್ತು ಬರೆಯುವಾಗ ಮಕ್ಕಳು ತಮ್ಮ ಅನುಕೂಲದ ಭಾಷೆಯನ್ನು ಜೋಡಿಸಿ ಬಳಸಲು ಅನುಮತಿ ನೀಡುವುದು

ಇದು ಮಕ್ಕಳಿಗೆ ತಮಗೆ ಅನುಕೂಲವೆನಿಸುವ ಭಾಷೆಯ ವ್ಯಾಕರಣ ಮತ್ತು ಶಬ್ದಗಳನ್ನು ಸಂಪೂರ್ಣವಾಗಿ ಬಳಸಿ ತಮ್ಮ ಭಾಷೆಯಲ್ಲಿ ಆಲೋಚನೆಗಳನ್ನು ವ್ಯಕ್ತಪಡಿಸಲು ಸಹಕರಿಸುತ್ತದೆ. ಹೊಸ ಭಾಷೆಯಲ್ಲಿ ಕೆಲವು ಪದಗಳನ್ನು ಅಥವಾ ವಾಕ್ಯಗಳನ್ನು ರಚಿಸುವ ಪ್ರಯೋಗದಲ್ಲಿ ಅವರು ತೊಡಗುವಾಗಲೂ ಇದು ನೆರವಾಗುತ್ತದೆ. ಬಹುಪಾಲು ದುಭಾಷಿ ಹಾಗೂ ಬಹುಭಾಷೀಯರು ಭಾಷೆಗಳನ್ನು ಸಲೀಸಾಗಿ ಬೆರೆಸಿ ಮಾತನಾಡುತ್ತಾರೆ. ಇದು ಸಣ್ಣ ಮಕ್ಕಳು ಒಂದು ಹೊಸ ಭಾಷೆಯನ್ನು ಕಲಿಯಲು ಬೆಂಬಲಿಸುವ ಒಂದು ಮಾರ್ಗವಾಗಿದೆ ಎಂದು ಗಾರ್ಸಿಯ ಮತ್ತು ವೀ (2014) ಹೇಳಿದ್ದಾರೆ. ಚಿತ್ರ 1ರಲ್ಲಿ ನಾಲ್ಕನೆಯ ತರಗತಿಯ ಮಗು ತನ್ನ ಮಾತೃಭಾಷೆಯಾದ ಮರಾಠಿಯನ್ನು ಹೊಸ ಶಾಲೆಯ ಭಾಷೆಯಾದ ಇಂಗ್ಲಿಷನ್ನು ಕಲಿಯಲು ಹೇಗೆ ಬಳಸಿತೆಂಬುದನ್ನು ತೋರಿಸುತ್ತದೆ.[iv]

ಮಕ್ಕಳ ಓದುವ ಮತ್ತು ಬರೆಯುವ ಆರಂಭಿಕ ಪ್ರಯತ್ನಗಳನ್ನು ಪ್ರೋತ್ಸಾಹಿಸುವುದು

ಗೀತಾಳಂತಹ ಚಿಕ್ಕ ಮಕ್ಕಳು ಶಾಲೆಗೆ ಬಂದಾಗ ತಮ್ಮ ಮನೆ ಭಾಷೆಯಿಂದ ಶಾಲಾ ಭಾಷೆಗೆ ಹೊಂದಿಕೊಳ್ಳಬೇಕಾಗುವುದು ಮಾತ್ರವಲ್ಲ, ಅವರು ಶಾಲಾ ಭಾಷೆಯಲ್ಲಿ ಓದಬೇಕು ಮತ್ತು ಬರೆಯಬೇಕೆಂಬ ನಿರೀಕ್ಷೆ ಕೂಡ ಇರುತ್ತದೆ. ಹಲವು ಶಾಲೆಗಳು ಚಿಕ್ಕಮಕ್ಕಳಿಗೆ ಮೊದಲು ಅಕ್ಷರಗಳನ್ನು (ವರ್ಣಮಾಲೆ) ಓದಲು ಮತ್ತು ಬರೆಯಲು ಕಲಿಸುತ್ತಾರೆ. ನಂತರ ಪದಗಳ ಕಲಿಕೆಯನ್ನು ಪ್ರಾರಂಭಿಸುತ್ತಾರೆ. ತದನಂತರ ವಾಕ್ಯಗಳು ಹಾಗೂ ಕೊನೆಯದಾಗಿ ಒಂದು ಪ್ಯಾರಾವನ್ನು ಓದಬೇಕೆಂದು ನಿರೀಕ್ಷಿಸುತ್ತಾರೆ. ಮೌಖಿಕ ಚಟುವಟಿಕೆಗಳು ಸಾಕಷ್ಟು ಕಡಿಮೆ. ಅವು ಕೇವಲ ಪ್ರಾಸ ಪದ್ಯಗಳನ್ನು ಹೇಳುವುದಕ್ಕೆ ಸೀಮಿತವಾಗಿರುತ್ತವೆ. ಶಾಲಾಮಕ್ಕಳು ಈಗಾಗಲೇ ತಾವು ಬಲ್ಲ ಮಾತನಾಡುವ, ಆಲಿಸುವ, ಆಲೋಚಿಸುವ ಹಾಗೂ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬಳಸುವುದಿಲ್ಲವಾದ್ದರಿಂದ ಶಾಲೆಗಳಲ್ಲಿ ಭಾಷೆಯನ್ನು ಹೇಳಿಕೊಡುವ ಈ ವಿಧಾನಗಳು ಉಪಯೋಗಕ್ಕೆ ಬರುವುದಿಲ್ಲ.

ಹಾಗಾದರೆ ಚಿಕ್ಕ ಮಕ್ಕಳಿಗೆ ನಾವು ಭಾಷಾ ಕಲಿಕೆ ಹೇಗೆ ಆರಂಭಿಸಬೇಕು?

ಅಗತ್ಯವಾಗಿರುವ ವಿಷಯಗಳೊಂದಿಗೆ ಸಂಪರ್ಕಿಸುವುದೇ ಇದಕ್ಕೆ ಸೂಕ್ತ ಉತ್ತರ

ಬಹಳ ದಶಕಗಳ ಅಧ್ಯಯನವು ಮಕ್ಕಳು ತಮಗೆ ಅರ್ಥ-ಪೂರ್ಣವಾಗಿರುವ, ಆಸಕ್ತಿದಾಯಕ ಎನಿಸುವ ಸಂದರ್ಭಗಳಲ್ಲಿ ಅವಲೋಕನ, ಪ್ರಯೋಗ, ಪರೀಕ್ಷೆ ಹಾಗೂ ಪ್ರಯತ್ನಗಳ ತಪ್ಪು ಸರಿಗಳ ಮೂಲಕ ಭಾಷೆಯನ್ನು ಕಲಿಯುತ್ತಾರೆಂದು ತೋರಿಸಿದೆ. ಹೀಗಾಗಿ ಅವರು ಕೆಲವೇ ವಾರಗಳಲ್ಲಿ ತಮಗೆ ಇಷ್ಟವಾದುದನ್ನು ಕರಗತ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಉದಾಹರಣೆಗೆ ಅವರು ಬೇಗನೆ ವೀಡಿಯೊ ಗೇಮ್‌ಗಳಲ್ಲಿ ಪರಿಣಿತಿ ಸಾಧಿಸುತ್ತಾರೆ. ಆದರೆ ಅಕ್ಷರಮಾಲೆಯನ್ನು ಕಲಿಯಲು ಅವರಿಗೆ ವರ್ಷಗಳ ಕಾಲ ಬೇಕಾಗುತ್ತದೆ!. ಭಾಷಾ ತರಗತಿಯಲ್ಲಿ ಮಕ್ಕಳಿಗೆ ಯಾವುದು ಮುಖ್ಯ ಅಗತ್ಯವೆನಿಸುತ್ತದೆಯೋ ಅವುಗಳ ಜೊತೆಗೆ ಸಂಪರ್ಕ ಕಲ್ಪಿಸಿ ಅವರಿಗೆ ನಾವು ಕಲಿಸಬಹುದು. ಇದನ್ನು ಶಿಕ್ಷಕರು ಹೇಗೆ ಮಾಡಬಲ್ಲರು?

ಮೌಖಿಕ ಅಭಿವ್ಯಕ್ತಿಗೆ ಅವಕಾಶಗಳನ್ನು ಒದಗಿಸುವುದು

ವಿಷಯ ಹಂಚಿಕೊಳ್ಳುವ ಸಮಯದಲ್ಲಿ ಮಕ್ಕಳಿಗೆ ತಮಗೆ ಬಹಳ ಇಷ್ಟವಾದುದನ್ನು ಹಂಚಿಕೊಳ್ಳಲು ಕೇಳಬಹುದು. ಅವರು ಕತೆ

ಹೇಳಬಹುದು ಅಥವಾ ಓದಬಹುದು. ತದನಂತರ ಅದರ ಬಗ್ಗೆ ಚರ್ಚೆ ನಡೆಸಬಹುದು. ಅವರನ್ನು ಒಂದು ಕ್ಷೇತ್ರ ಪ್ರವಾಸಕ್ಕೆ ಕರೆದೊಯ್ದು ನಂತರ ಚರ್ಚೆ ಮಾಡಬಹುದು ಅಥವಾ ಸಮುದಾಯದ ಒಬ್ಬ ಗಣ್ಯರನ್ನು ಮಕ್ಕಳ ಜೊತೆಗೆ ಮಾತನಾಡಲು ಕರೆಸಬಹುದು. ಮಕ್ಕಳು ಆಲೋಚಿಸಬೇಕು, ಸಂಪರ್ಕಿಸಬೇಕು ಹಾಗೂ ಪರಸ್ಪರ ಇತರ–ರೊಂದಿಗೆ ಮಾತನಾಡಿ ಅವರ ಮಾತುಗಳನ್ನು ಆಲಿಸಿ ಅಭಿಪ್ರಾಯ ಹಂಚಿಕೊಳ್ಳಬೇಕು ಹಾಗೂ ತಮ್ಮ ಭಾವನೆಗಳನ್ನು ಹೇಳಬೇಕು ಎನ್ನುವುದು ಈ ಎಲ್ಲ ಚಟುವಟಿಕೆಗಳ ಮುಖ್ಯ ಉದ್ದೇಶವಾಗಿದೆ. ಈ ಹಿಂದೆ ಹೇಳಿದಂತೆ, ಮಕ್ಕಳಿಗೆ ತಮ್ಮ ಮನೆ ಭಾಷೆಯಲ್ಲಿ ಮಾತನಾಡಲು ಅಥವಾ ಭಾಷೆಗಳನ್ನು ಬೆರೆಸಿ ಮಾತನಾಡಲು ಪ್ರೋತ್ಸಾಹ ನೀಡಬೇಕು. ಇದು ಅರಿವು ಮೂಡಲು, ಅವರ ಶಬ್ದಭಂಡಾರ ಹೆಚ್ಚಲು, ಹೊಸ ಭಾಷೆಯ ತಿಳುವಳಿಕೆ ಹೆಚ್ಚಾಗಲು ಹಾಗೂ ತಮ್ಮ ಸುತ್ತಮುತ್ತಲಿನ ಪ್ರಪಂಚದ ಬಗ್ಗೆ ಹೆಚ್ಚು ಜ್ಞಾನವನ್ನು ಪಡೆಯಲು ನೆರವಾಗುವುದು. ಮಕ್ಕಳಿಗೆ ಒಂದು ಪುಸ್ತಕ, ಒಂದು ಕಥೆ ಅಥವಾ ಒಂದು ಅನುಭವದ ಬಗ್ಗೆ ಏನನ್ನಿಸುತ್ತದೆ ಎಂದು ಕೇಳಿದಾಗ ಮಕ್ಕಳು ಸಂಪರ್ಕವಿಲ್ಲದ ಮಾತುಗಳನ್ನು ಆಡಿದಾಗ ಆ ಬಗ್ಗೆ ತಿಳಿಯಲು ಶಿಕ್ಷಕರಿಗೆ ಸಾಧ್ಯವಾಗುತ್ತದೆ ಹಾಗೂ ಮಕ್ಕಳಲ್ಲಿ ವಿಚಾರವಂತಿಕೆ ಬೆಳೆಯಲು ಹಾಗೂ ಭಾವನೆಗಳನ್ನು ಹೇಳಲು ಅವಕಾಶ ಒದಗಿದಂತಾಗುತ್ತದೆ.

ಓದುವ ಹಾಗೂ ಬರೆಯುವ ಕೆಲಸದಲ್ಲಿ ಪ್ರಯೋಗ ಮಾಡಲು ಅವಕಾಶಗಳನ್ನು ಒದಗಿಸುವುದು

ಮಕ್ಕಳಿಗೆ ಪ್ರತಿದಿನ ಚಿತ್ರಗಳಿರುವ ಪುಸ್ತಕಗಳನ್ನು ತಿರುವಿ ಹಾಕಲು ಅನುಮತಿ ನೀಡಿದರೆ ಅವರಿಗೆ ಎಲ್ಲ ಅಕ್ಷರಗಳು ಅಥವಾ ಪದಗಳನ್ನು ಓದದಿದ್ದರೂ ಪುಟಗಳನ್ನು ತಿರುವಿ ಹಾಕುತ್ತಾರೆ, ಚಿತ್ರಗಳನ್ನು ನೋಡುತ್ತಾರೆ, ಬೇರೆಯವರ ಜೊತೆಗೆ ಇದರ ಬಗ್ಗೆ ಮಾತನಾಡುತ್ತಾರೆ (ಚಟುವಟಿಕೆಯಲ್ಲಿ ಇಬ್ಬಿಬ್ಬರಂತೆ ಸೇರಿಸಿದರೆ) ಮತ್ತು ಅದರ ಅರ್ಥವನ್ನು ಹುಡುಕಲು ಪ್ರಯತ್ನ ಮಾಡುತ್ತಾರೆ. ಕೆಲವು ಮಕ್ಕಳು ಓದುತ್ತಿರುವಂತೆ ನಟಿಸಬಹುದು ಅಥವಾ ಪುಸ್ತಕದ ಕೆಲವು ಪದಗಳನ್ನು ಅವರು ಗುರುತಿಸಬಹುದು. ಕಾಲಾನಂತರ ಅವರು ನಿಧಾನವಾಗಿ ಓದುವುದರಲ್ಲಿ ಹೆಚ್ಚು ಹೆಚ್ಚು ನಿಖರತೆಯನ್ನು ಸಾಧಿಸುತ್ತಾರೆ.

ಹಾಗೆಯೇ, ತರಗತಿಯಲ್ಲಿ ಚರ್ಚೆ ಮಾಡಿರುವ ವಿಷಯದ ಬಗ್ಗೆ ಬರೆಯಲು ಅಥವಾ ಚಿತ್ರ ಬಿಡಿಸಲು ಮಕ್ಕಳಿಗೆ ಅವಕಾಶ ನೀಡಿದರೆ, ಅವರು ಬರೆಯುವ ಪ್ರಯೋಗದಲ್ಲಿ ತೊಡಗುತ್ತಾರೆ. ಅವರು ಒಂದು ಚಿತ್ರವನ್ನು ಬಿಡಿಸಬಹುದು ಅಥವಾ ತಮಗೆ ತಿಳಿದಿರುವ ಕೆಲವು ಅಕ್ಷರಗಳನ್ನು ಅಥವಾ ಪದಗಳನ್ನು ಬರೆಯಬಹುದು. ಏನು ಬರೆದಿದ್ದಾರೆಂದು ಕೇಳಿದಾಗ ಅವರು ಇನ್ನೂ ವಿವರವಾಗಿ ಸುಂದರವಾಗಿ ವಿವರಿಸಬಹುದು! ಈ ಸನ್ನಿವೇಶದಲ್ಲಿ ಅವರ ಕಾಗುಣಿತವನ್ನು ಸರಿಪಡಿಸುವ ಬದಲು, ಅವರು ಹೇಳಿರುವ ವಿಷಯವನ್ನು ಅವರ ಬರಹದ ಕೆಳಗೆ ಬರೆದು ಅವರಿಗೆ ಅದನ್ನು ಓದಲು ಹೇಳಬೇಕು. ಮಕ್ಕಳ ಈ ಬರಹವನ್ನು ತರಗತಿಯಲ್ಲಿ ಪ್ರದರ್ಶಿಸಬೇಕು, ಅದನ್ನು ಹಂಚಿಕೊಳ್ಳಲು ಕಾಲಾವಕಾಶ ನೀಡಬೇಕು. ಮತ್ತು ಪರಸ್ಪರ ಇತರರ ಕೆಲಸವನ್ನು ಮೆಚ್ಚುವಂತೆ ಪ್ರೇರೇಪಿಸಬೇಕು.

ಮುದ್ರಿತ ಚಿತ್ರಗಳಿಂದ ತರಗತಿಯನ್ನು ಸೊಗಸಾಗಿಸುವುದು

ಮಕ್ಕಳು ಬಿಡಿಸಿದ ಅಥವಾ ಮುದ್ರಿಸಿದ ಚಿತ್ರಗಳಿಂದ ತರಗತಿಯನ್ನು ತುಂಬಿಸಿ. ಈ ವರ್ಣರಂಜಿತ ತರಗತಿಯು ಮಕ್ಕಳಿಗಾಗಿ ಅಥವಾ ಮಕ್ಕಳಿಂದ ಮಾಡಿದ ಬರಹ ಮತ್ತು ಚಿತ್ರಕಲೆಯ ಪ್ರದರ್ಶನವಾಗಿರ–ಬೇಕು. ಮಕ್ಕಳ ಬರಹ ಅಥವಾ ಚಿತ್ರವಸ್ತುಗಳನ್ನು ತರಗತಿಯ ಬೇರೆ ಬೇರೆ ಕಡೆಗಳಲ್ಲಿ ಹಾಕಬಹುದು ಮತ್ತು ಹಲವು ಭಾಷೆಗಳಲ್ಲಿ ಬರೆದು ಹಾಕಬಹುದು. ಮಕ್ಕಳಿಗೆ ಆಸಕ್ತಿಯಿರುವ ಅಥವಾ ಕಲಿಕೆ ಅಗತ್ಯವಿರುವ ಮಾಹಿತಿಯ ಪದಗಳು, ಪದ್ಯಗಳು ಇತ್ಯಾದಿ ಸ್ವರೂಪಗಳಲ್ಲಿ ಪ್ರದರ್ಶನ ಮಾಡಬಹುದು ಮತ್ತು ಪಾಠ ಹೇಳಿಕೊಡುವಾಗ ಮತ್ತು ಚಟುವಟಿಕೆ ಸಮಯದಲ್ಲಿ ಇವುಗಳನ್ನು ಬಳಸಬಹುದು.

ಭಾಷಾ ತರಗತಿಯ ಉದ್ದೇಶವೆಂದರೆ ಕಲಿಕೆಯನ್ನು ಅರ್ಥಪೂರ್ಣವಾಗಿಸುವುದು

ಈ ಲೇಖನದಲ್ಲಿ ಒತ್ತು ನೀಡಿದಂತೆ, ಮಕ್ಕಳು ಸಹಜವಾಗಿಯೇ ಅರ್ಥ ತುಂಬುವವರು ಅಥವಾ ಉಂಟುಮಾಡುವವರು. ಅವರಿಗೆ ಅರ್ಥವಾಗುವ ರೀತಿಯಲ್ಲಿ ನಾವು ಕಲಿಸಿದಾಗ ಅವರು ಸಹಜವಾಗಿ, ಸಲೀಸಾಗಿ, ಸರಾಗವಾಗಿ ಕಲಿಯುತ್ತಾರೆ. ನಾವು ನೀರಸವಾಗಿ, ಒಂದಕ್ಕೊಂದು ಸಂಬಂಧವಿಲ್ಲದಂತೆ ವಿಷಯಗಳನ್ನು ಕಲಿಸಿದರೆ ಮಕ್ಕಳು ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಇಲ್ಲವೇ ಬೇಗ ಮತ್ತು ಸಲೀಸಾಗಿ ಕಲಿಯುವುದನ್ನು ಬಹಳ ಪ್ರಯತ್ನಪಟ್ಟು ಹೆಣಗಾಡಿ ಕಲಿಯುತ್ತಾರೆ.

ಈ ಹಿಂದಿನ ವಿಭಾಗಗಳಲ್ಲಿ ಮಕ್ಕಳಿಗೆ ತಮ್ಮ ಮನೆ ಭಾಷೆಯಲ್ಲಿ ವ್ಯಕ್ತಪಡಿಸಲು, ವಿಷಯಗಳು ಮತ್ತು ವಿಚಾರಗಳನ್ನು ಚರ್ಚಿಸಲು ಹಂಚಿಕೊಳ್ಳಲು, ಕಲಿಯುತ್ತಿರುವ ಓದು ಮತ್ತು ಬರಹವನ್ನು ಸಲೀಸಾಗಿ ಪ್ರಯೋಗ ಮಾಡಲು ಅನುವು ಮಾಡುವುದರ ಪ್ರಾಮುಖ್ಯತೆಯನ್ನು ಚರ್ಚಿಸಿದ್ದೇನೆ. ಇವೆಲ್ಲವನ್ನು ಮಾಡಿದಾಗ ಭಾಷಾಕಲಿಕೆಯು ಅವರಿಗೆ ಅರ್ಥಪೂರ್ಣವಾಗಿ ಕಾಣುತ್ತದೆ. ಇದರೊಂದಿಗೆ, ಮಕ್ಕಳ ಜೊತೆಗೆ ನಮ್ಮ ವ್ಯವಹಾರದ ಮುಖ್ಯ ಕೆಲಸವು ಅರ್ಥಪೂರ್ಣವಾಗುವುದನ್ನು ಖಚಿತಪಡಿಸಲು ಮಾಡಬೇಕಾದ ಎಲ್ಲ ವಿಷಯಗಳನ್ನು ಇದು ಒಳಗೊಂಡಿದೆ.

ಆಲೋಚನೆಯನ್ನು ಸಲೀಸಾಗಿ ವ್ಯಕ್ತಪಡಿಸುವುದು

ಮಕ್ಕಳ ಭಾಷೆ(ಗಳು) ಕಲಿಯುವ ಸಮಯದಲ್ಲಿ ನಾವು ಅರ್ಥ ಕಂಡುಕೊಳ್ಳುವಲ್ಲಿ ಗಮನಹರಿಸಿ ಅವರಿಗೆ ನೆರವು ನೀಡಬೇಕು. ಮಕ್ಕಳು ಉತ್ತರ ನೀಡುವಾಗ ಪಠ್ಯಪುಸ್ತಕದಲ್ಲಿ ಇರುವಂತೆಯೇ ಹೇಳಿ ಎಂದು ಹೇಳಬೇಕಿಲ್ಲ. ಉದಾಹರಣೆಗೆ, ಲೇಖನದ ಆರಂಭದಲ್ಲಿ ಉಲ್ಲೇಖಿಸಿದ ಚಿಕ್ಕ ಹುಡುಗಿ ಗೀತಾ ಬಾಲಭಾರತಿ ಪಠ್ಯಪುಸ್ತಕದಿಂದ ಗಟ್ಟಿಯಾಗಿ ಓದುತ್ತಿದ್ದ ಮಳೆ ಕುರಿತ ಒಂದು ಪದ್ಯವನ್ನು ಕೇಳಿಸಿಕೊಳ್ಳುತ್ತಿದ್ದಳು. ಗಟ್ಟಿಯಾಗಿ ಪದ್ಯ ಓದಿದ ನಂತರ ಶಿಕ್ಷಕರು ಮಕ್ಕಳಿಗೆ ಅದರ ಬಗ್ಗೆ ಪ್ರಶ್ನೆಗಳನ್ನು ಕೇಳಿದರು. ಗೀತಾಗೆ ಸ್ವತಃ ಪಠ್ಯಪುಸ್ತಕವನ್ನು ಓದಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಅವಳು ಏನಾಗುತ್ತಿದೆ ಎಂಬುದರ ಬಗ್ಗೆ ಬಹಳ ಗಮನವಿಟ್ಟು ಕೇಳಿಸಿ–ಕೊಂಡಿದ್ದಳು. ಕೇಳುತ್ತಿದ್ದಂತೆ ಅದರ ಅರ್ಥವನ್ನು ತಿಳಿಯಲು ಪ್ರಯತ್ನಪಡುತ್ತಿದ್ದಳು. ಗೀತಾ ಹಲವಾರು ಬಾರಿ ಚರ್ಚೆಯಲ್ಲಿ ಭಾಗಿಯಾಗಲು ಪ್ರಯತ್ನ ಪಡುತ್ತಿರುವುದನ್ನು ನಾವು ನೋಡಿದ್ದೆವು. ಆದರೆ ಅವಳು ಪುಸ್ತಕದಲ್ಲಿ ಹೇಗೆ ಪದ ಬಳಕೆ ಆಗಿದೆಯೋ ಅದರಂತೆ ಹೇಳದ ಕಾರಣ ಶಿಕ್ಷಕರು ಅವಳ ಮಾತುಗಳನ್ನು ನಿರ್ಲಕ್ಷಿಸಿದರು. ಉದಾಹರಣೆಗೆ:

ಶಿಕ್ಷಕರು: ಮಳೆ ಬಂದಾಗ ಆಕಾಶದಲ್ಲಿ ಏನಾಗುತ್ತದೆ?

ಗೀತಾ: (ನಟನೆ ಮೂಲಕ ತಕ್ಷಣ ಉತ್ತರ): ಚಕನ್ ಚಮಕ್‌ತಾ (ಹೊಳೆಯುವ ಗೆರೆಗಳು)

ಇತರ ಮಕ್ಕಳು: ವೀಜ್ (ಮಿಂಚು = ಪುಸ್ತಕದ ನಿಖರ ಪದ)

ಶಿಕ್ಷಕ: ಸರಿ, ವೀಜ್!

ಗೀತಾ ತಾನೇ ಸ್ವತಃ ಸೃಜನಾತ್ಮಕವಾಗಿ ಮತ್ತು ಕಲಾತ್ಮಕವಾಗಿ ವ್ಯಕ್ತಪಡಿಸುತ್ತಿದ್ದಳು, ಅವಳು ಅಲ್ಲಿನ ಸ್ಥಳೀಯ ಭಾಷೆಯಲ್ಲಿ ಹೇಳುವ ಪದವನ್ನು ತಿಳಿದಿರಲಿಲ್ಲ. ಆದರೆ ಅಲ್ಲಿನ ವಿಷಯವನ್ನು ಅರ್ಥಮಾಡಿಕೊಂಡಿದ್ದಾಳೆ ಎಂದು ಇದು ತೋರಿಸುತ್ತದೆ. ಹೀಗೆ ಪದೆ ಪದೇ ಶಿಕ್ಷಕರಿಂದ (ಸಹಪಾಠಿಗಳಿಂದ) ನಿರ್ಲಕ್ಷಿತಗೊಂಡ ಗೀತಾರಂತಹ ಮಕ್ಕಳು ತಾವು ಅರ್ಥ ಮಾಡಿಕೊಂಡಿದ್ದು ಸರಿಯಲ್ಲ, ತಮ್ಮ ಆಲೋಚನೆ ಸರಿಯಲ್ಲ, ತಮಗೆ ಸರಿಯಾಗಿ ಗೊತ್ತಿಲ್ಲ ಎಂದು ಭಾವಿಸಿ ಶಾಲಾ ಕಲಿಕೆಯಿಂದ ದೂರ ಸರಿಯುತ್ತಾರೆ.

ಮಕ್ಕಳಿಗೆ ಅರ್ಥಪೂರ್ಣವಾಗಿರುವ ಪದಗಳನ್ನು ಓದಲು ಮತ್ತು ಬರೆಯಲು ಅನುಮತಿ ನೀಡುವುದು

ಒಂದು ನಿರ್ದಿಷ್ಟ ಕ್ರಮದಲ್ಲೇ ಚಿಕ್ಕ ಮಕ್ಕಳಿಗೆ ನಾವು ಓದಲು ಮತ್ತು ಬರೆಯಲು ಕಲಿಸಲು ಗಮನ ಹರಿಸುತ್ತೇವೆ. ಹೀಗಾಗಿ ಅವರನ್ನು ಅವರ ಶಬ್ದ ಭಂಡಾರದಿಂದ ದೂರ ಸರಿಸುತ್ತೇವೆ. ಏಕೆಂದರೆ ಇಂತಹ ಬಹುತೇಕ ಪದಗಳು ದ್ವಿತೀಯ ಸ್ವರ ಮಾತ್ರೆಗಳನ್ನು ಮತ್ತು ಸಂಯೋಗ ವ್ಯಂಜನಗಳು ಅಥವಾ ಸಂಯುಕ್ತಾಕ್ಷರಗಳನ್ನು ಹೊಂದಿರುತ್ತವೆ. ಉದಾಹರಣೆಗೆ, ಮಗುವಿಗೆ ಚಿನ್ನ ಎಂಬ ಪದ ತಿಳಿದಿರುತ್ತದೆ. ಆದರೆ ಪಠ್ಯಪುಸ್ತಕದಲ್ಲಿ ಕನಕ ಎಂಬ ಪದ ಬರುತ್ತದೆ, ಅಲ್ಲಿ ಸಂಯುಕ್ತ ಮಾತ್ರೆಗಳಿರುವುದಿಲ್ಲ. ಅರಿಲ್ ಅಧ್ಯಯನದಲ್ಲಿ, ನಾವು ಕರ್ನಾಟಕದ ಪಾಠವನ್ನು ಗಮನಿಸಿದೆವು. ಅಲ್ಲಿ ಮಕ್ಕಳು ತರಗತಿಯಲ್ಲಿ ಅರಸ, ಗರಗಸ, ಸರ, ಗರಗರ ಮತ್ತು ದಸರ ಪದಗಳನ್ನು ಕಲಿಯುತ್ತಿದ್ದರು. ಏಕೆಂದರೆ ಈ ಪದಗಳು ಒಂದೇ ತೆರನಾದ ಅಕ್ಷರಗಳನ್ನು ಹೊಂದಿತ್ತು. ಈ ಪದಗಳನ್ನು ಕೃತಕವಾಗಿ ಒಟ್ಟಿಗೆ ಸೇರಿಸಿ ಒಂದು ಪ್ಯಾರಾ ಆಗಿ ಹೇಳಿಕೊಡಲಾಗುತ್ತಿತ್ತು. ಹೀಗಾಗಿ ಹೆಚ್ಚಿನ ಮಕ್ಕಳಿಗೆ ಇದನ್ನು ಕಲಿಯಲು ಸ್ವಲ್ಪವೂ ಆಸಕ್ತಿ ಉಂಟಾಗಲಿಲ್ಲ. ಏಕೆಂದರೆ ಈ ಎಲ್ಲ ಪದಗಳ ನಡುವೆ ಅಥವಾ ಪದಗಳು ಮತ್ತು ಅವು ಮಕ್ಕಳ ಬದುಕು ಮತ್ತು ಆಸಕ್ತಿಗಳ ನಡುವೆ ಯಾವುದೇ ರೀತಿಯ ಸಂಬಂಧ ಹೊಂದಿರಲಿಲ್ಲ.

ಹೆಸರಾಂತ ಶಿಕ್ಷಣ ತಜ್ಞರಾದ ಸಿಲ್ವಿಯ ಆಶ್ಟನ್-ವಾರ್ನರ್ (1963) ನ್ಯೂಜಿಲ್ಯಾಂಡಿನ ಮೊಯಾರಿ ಮಕ್ಕಳೊಂದಿಗೆ ಕೆಲಸ ಮಾಡಿದ್ದರು. ಅವರು ಮಕ್ಕಳಿಗೆ ಕಲಿಯಲು ಆಸಕ್ತಿಯಿರುವ ಪದಗಳನ್ನು ಕೊಟ್ಟರೆ ಅವರು ಬೇಗ ಅವುಗಳನ್ನು ಓದಲು ಮತ್ತು ಬರೆಯುವುದನ್ನು ಕಲಿಯಲು ಇಷ್ಟಪಡುತ್ತಾರೆ ಎಂದು ವಾದಿಸುತ್ತಾರೆ. ಅವರು ಪ್ರತಿಯೊಂದು ಮಗುವಿಗೆ ತನ್ನದೇ ಸ್ವಂತ ಆಸಕ್ತಿಯಿಂದ ಆರಿಸಿರುವ ಒಂದು ಮುಖ್ಯವಾದ ಪದವನ್ನು ಬರೆಯುತ್ತಿದ್ದರು. ಆದರೆ ಆ ಪದಗಳನ್ನು ಹೇಳಿಕೊಡಲು ಒಂದು ನಿರ್ದಿಷ್ಟ ಕ್ರಮವನ್ನೇನೂ ಅನುಸರಿಸುತ್ತಿರಲಿಲ್ಲ. ಆಶ್ಟನ್ ವಾರ್ನರ್‌ರ ಈ ವಿಚಾರಗಳನ್ನು ಆಧರಿಸಿ ಪ್ರಮುಖ ಶಬ್ದ ಸಮೂಹವನ್ನು ಒಂದು ಪದಗಳ ಕಾರ್ಡಿನಲ್ಲಿ ಬರೆದು ಪ್ರತಿಯೊಂದು ಮಗುವಿಗೆ ನೀಡಬಹುದು ಅಥವಾ ತರಗತಿಯ ಎಲ್ಲ ಮಕ್ಕಳಿಗೆ ಆಸಕ್ತಿದಾಯಕವಾದ ಪದಗಳನ್ನು ತರಗತಿಯ ಚಾರ್ಟ್‌ನಲ್ಲಿ ಬರೆಯಬಹುದು. ಕಲಿಯುವಾಗ ಮಕ್ಕಳ ಓದು ಮತ್ತು ಬರಹದಲ್ಲಿ ಈ ಪದಗಳನ್ನು ಬಳಸಲು ಪ್ರೋತ್ಸಾಹ ನೀಡಬಹುದು. ಈ ರೀತಿಯಾಗಿ ಓದುವುದು ಆಸಕ್ತಿಯುಂಟು ಮಾಡುವ ಅಭ್ಯಾಸವಾಗುತ್ತದೆ ಮತ್ತು ಬರೆಯುವುದೂ ಕೂಡ ಅರ್ಥಪೂರ್ಣ ಕೆಲಸವಾಗುತ್ತದೆ.

ಪ್ರತಿದಿನ ಗಟ್ಟಿಯಾಗಿ ಓದುವುದು

ಕೇವಲ ಪಠ್ಯಪುಸ್ತಕವನ್ನು ಮಾತ್ರ ಅವಲಂಬಿಸುವ ಬದಲು, ಆಸಕ್ತಿಯುಂಟುಮಾಡುವ, ಸಮೃದ್ಧವಾಗಿರುವ ಮಕ್ಕಳ ಸಾಹಿತ್ಯವನ್ನು ತರಗತಿಯೊಳಗೆ ತರಲೇಬೇಕು. ಅವುಗಳನ್ನು ಮಕ್ಕಳಿಗೆ ಗಟ್ಟಿಯಾಗಿ ಓದಬೇಕು. ಕಥೆ ಪುಸ್ತಕಗಳು ಅಥವಾ ಕವನಗಳನ್ನು ಓದಬಹುದು ಅಥವಾ ಮಕ್ಕಳ ಕುತೂಹಲ ಕೆರಳಿಸುವ ಇತರ ವಿಷಯಗಳ ನಾನ್-ಫಿಕ್ಷನ್ (ಕಾಲ್ಪನಿಕವಲ್ಲದ/ಅಕಲ್ಪಿತ) ಪುಸ್ತಕಗಳನ್ನು ತರಬಹುದು. ಈ ವಿಚಾರಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ ಮತ್ತು ಅವರ ಪ್ರತಿಕ್ರಿಯೆಗಳನ್ನು ಸ್ವಾಗತಿಸಬೇಕು. ಅವರ ಆಲೋಚನೆ ಮತ್ತು ಆಸಕ್ತಿಗಳನ್ನು ಬೆಂಬಲಿಸಬೇಕು. ಈ ಪ್ರಕ್ರಿಯೆಯ ಮೂಲಕ ಮಕ್ಕಳು ತಮ್ಮದೇ ಆದ ಆಲೋಚನೆಗಳು ಮತ್ತು ಆಸಕ್ತಿಗಳನ್ನು ತಳ್ಳಿಹಾಕದಿದ್ದರೆ, ನಿಧಾನವಾಗಿ ಅವರಿಗೆ ಪುಸ್ತಕಗಳು ಮತ್ತು ಆಲೋಚನೆಗಳ ಜಗತ್ತಿನ ಪರಿಚಯವಾಗುವುದು. ಅವರು ಹೊಸ ಪದಸಂಪತ್ತುಗಳನ್ನು ಕಲಿಯುವರು ಮತ್ತು ಹೊಸ ರೀತಿಯಲ್ಲಿ ಸ್ವತಃ ವ್ಯಕ್ತಪಡಿಸುವುದನ್ನು ಕಲಿಯುವರು. ಅವರ ಶಬ್ದ ಭಂಡಾರ ಹೆಚ್ಚಾಗುವುದು. ಅವರು ತಮ್ಮ ಅನುಭವಕ್ಕೆ ಮೀರಿ ಹೊಸ ಆಲೋಚನೆಗಳು ಮತ್ತು ವಿಚಾರಗಳನ್ನು ಮೈಗೂಡಿಸಿಕೊಳ್ಳುವರು.


ಬರೆಯುವುದನ್ನು ಪಠ್ಯಕ್ರಮದ ಮುಖ್ಯ ಭಾಗವಾಗಿ ಮಾಡುವುದು

ಈ ಮೊದಲೇ ಚರ್ಚಿಸಿದಂತೆ, ಮಕ್ಕಳಿಗೆ ಅಕ್ಷರಗಳನ್ನು ಬರೆಯಲು ಅಥವಾ ಸರಿಯಾಗಿ ಕಾಗುಣಿತ ಬರೆಯಲು ಸಾಧ್ಯವಾಗದಿದ್ದರೂ ಕೂಡ ಅವರ ಬರವಣಿಗೆಯ ಪ್ರಯತ್ನಗಳ ಮೂಲಕ ತಮ್ಮನ್ನು ತಾವು ವ್ಯಕ್ತಪಡಿಸಲು ಅವರನ್ನು ಪ್ರೋತ್ಸಾಹಿಸಬೇಕು. ನೀವು ಅವರ ಪ್ರಯತ್ನಗಳನ್ನು ಹಲವಾರು ರೀತಿಯಲ್ಲಿ ಬೆಂಬಲಿಸಬಹುದು. ಉದಾಹರಣೆಗೆ, ಒಂದು ಕ್ಷೇತ್ರ ಭೇಟಿಯನ್ನು ಮಾಡಿ ಅದರ ಬಗ್ಗೆ ಸ್ಥೂಲ ಚರ್ಚೆಯ ನಂತರ, ಭೇಟಿಯ ಕುರಿತು ಕೆಲವು ಸಾಲುಗಳನ್ನು ಬರೆಯಲು ತಮಗೆ ಸಹಾಯ ಮಾಡುವಂತೆ ಮಕ್ಕಳಲ್ಲಿ ಕೇಳಬಹುದು. ಆ ಸಾಲುಗಳನ್ನು ಹೇಗೆ ಬರೆಯುವುದೆಂದು ಅವರಿಗೆ ಮಾದರಿ ಸಾಲುಗಳನ್ನು ಬರೆದು ತೋರಿಸಬಹುದು. ನಂತರ ಮಕ್ಕಳು ಅದನ್ನು ಓದಲು ಚಾರ್ಟ್ ಮಾಡಿ ಹಾಕಬಹುದು.

ಇಲ್ಲವೇ ಕತೆಯನ್ನು ಗಟ್ಟಿಯಾಗಿ ಓದಿ ಅವರಿಗೆ ಮೆಚ್ಚುಗೆಯಾದ ಭಾಗವನ್ನು ಬರೆಯಲು ಅಥವಾ ಚಿತ್ರ ಬರೆಯಲು ನೀವು ಮಕ್ಕಳಿಗೆ ಕೇಳಬಹುದು. ಯಾವುದೇ ಮುಖ್ಯವಾದ ವಿಷಯದ ಬಗ್ಗೆ ಪತ್ರ ಬರೆಯಲು ನೀವು ಅವರಿಗೆ ಸಹಾಯ ಮಾಡಬಹುದು. ಅದು ವಲಸೆ ಹೋದ ಅವರ ಗೆಳೆಯ ಅಥವಾ ಪೋಷಕರು, ಬೇರೆ ಹಳ್ಳಿಯಲ್ಲಿರುವ ತಾತ ಅಥವಾ ಅಜ್ಜಿ ಅಥವಾ ಅವರ ಇಷ್ಟಪಾತ್ರರನ್ನು ಕುರಿತು ಆಗಿರಬಹುದು. ಅವರ ಸಮುದಾಯದ ಯಾವುದಾದರೂ ಜಾನಪದ ಕತೆ ಅಥವಾ ಹಾಡನ್ನು ಬರೆಯಲು ನೆರವು ನೀಡಬಹುದು. ಕಾಲಾಂತರದಲ್ಲಿ, ಅವರಿಗೆ ಬೇರೆಬೇರೆ ಪ್ರಕಾರಗಳ ಬರಹಗಳನ್ನು ಪರಿಚಯಿಸಬಹುದು. (ಅದು ಪದ್ಯಗಳು, ಕವನಗಳು, ಕತೆಗಳು ಇತ್ಯಾದಿ ಆಗಿರಬಹುದು). ಅವರು ಶಾಲೆಯಲ್ಲಿ ಕಲಿಯುವುದಕ್ಕಿಂತ ಇವೆಲ್ಲವೂ ಬಹಳ ಭಿನ್ನವಾಗಿರುತ್ತವೆ!.

ನಾನು ಈ ಲೇಖನವನ್ನು ಒಂದು ಒಗಟಿನಿಂದ ಆರಂಭಿಸಿದೆ: ಪ್ರಾರಂಭಿಕ ಭಾಷಾ ತರಗತಿಗಳಲ್ಲಿ ಗೀತಾಳಂತಹ ಬಹಳ ಬುದ್ಧಿವಂತರಾದ, ಸಮರ್ಥ ಮಕ್ಕಳು ಕಲಿಯಲು ಏಕೆ

ವಿಫಲರಾಗುತ್ತಾರೆ? ಈ ಪ್ರಶ್ನೆಗೆ ಉತ್ತರ ಇಲ್ಲಿ ನಾನು ಸೂಚಿಸಿರುವುದಕ್ಕಿಂತ ಬಹಳ ಸಂಕೀರ್ಣವಾಗಿರಬಹುದು. ಆದರೆ ಈ ಸಮಸ್ಯೆಯನ್ನು ಪರಿಹರಿಸುವತ್ತ ಸಾಗಲು ಚಿಕ್ಕ ಮಕ್ಕಳಿಗೆ ಹೆಚ್ಚು ಸೂಕ್ತ ಕಲಿಕೆಯನ್ನು ಒದಗಿಸಲು ಬಹುದೂರ ಸಾಗಬೇಕಿದೆ ಎಂಬುವುದನ್ನು ನಾನು ಒಪ್ಪುವುದಿಲ್ಲ. ಪ್ರತಿಯೊಂದು ಮಗುವಿಗೆ ಕಲ್ಪನಾತ್ಮಕವಾಗಿ, ಕಲ್ಪನಾಶಕ್ತಿಯನ್ನು ಪ್ರೇರೇಪಿಸುವ ರೀತಿಯಲ್ಲಿ ಊಹಾಪ್ರಪಂಚಕ್ಕೆ ಕೊಂಡೊಯ್ದು ಹೇಳಿಕೊಟ್ಟರೆ ಮಗುವು ಕಲಿಯಬಲ್ಲದು ಮತ್ತು ಕಲಿಯುತ್ತದೆ! ನಾನು ಇದನ್ನು ಸಾಕಾರಗೊಳಿಸಲು ಕೇವಲ ಮೂರು ಪ್ರಮುಖವಾದ ವಿಚಾರಗಳನ್ನು ಸೂಚಿಸಿದ್ದೇನೆ. ಮಕ್ಕಳ ಮನೆ ಭಾಷೆಯನ್ನು ಸ್ವಾಗತಿಸುವುದು, ಒಪ್ಪುವುದು, ಅದರಲ್ಲಿ ಕಲಿಸುವುದು, ಮಕ್ಕಳಿಗೆ ಭಾಷಾ ಕಲಿಕೆಯಲ್ಲಿ ಹೊರಹೊಮ್ಮುತ್ತಿರುವ ಪ್ರಯತ್ನಗಳನ್ನು ಪ್ರೋತ್ಸಾಹಿಸುವುದು ಮತ್ತು ಭಾಷಾ ತರಗತಿಯ ಕೇಂದ್ರವೇ ಅರ್ಥ ನೀಡಿಕೆ, ಅರ್ಥೈಸುವಿಕೆ–ಯಾಗಬೇಕೆಂಬ ಕೆಲವು ಸಲಹೆಗಳನ್ನು ಈಗಾಗಲೇ ನಾನು ಉಲ್ಲೇಖಿಸಿದ್ದೇನೆ. ಕಲಿಕಾಗಾರರಿಗೆ ಸೂಕ್ತತೆಯನ್ನು ಉಂಟು–ಮಾಡುವ ಸಮಸ್ಯೆಯನ್ನು ನಿವಾರಿಸಲು ಶಿಕ್ಷಕರು ಇನ್ನೂ ಬೇರೆ ಉಪಾಯಗಳು ಹಾಗೂ ವಿಚಾರಗಳನ್ನು ಆಲೋಚಿಸಲು ಸಮರ್ಥರು ಎಂದು ನಾನು ಭಾವಿಸುತ್ತೇನೆ.



i Name has been changed to protect identity.

ii The Literacy Research in Indian Languages was a longitudinal research project that tracked over 700 students in Palghar district, Maharashtra, and Yadgir district, Karnataka as they moved from Grades 1-3. See Menon, S. et al. (2017). *Literacy research in Indian languages (LiRIL): Report of a three year longitudinal study on early reading and writing in Marathi and Kannada. Bangalore: Azim Premji University and New Delhi: Tata Trusts.*

iii For more ideas, please refer to Sinha, S. (2018). Creating spaces for the child's language within classrooms. Retrieved from: http://eli.tiss.edu/wp-content/uploads/2017/08/ELI-Handout-2-Multilingualism-.pdf; and to Menon, S., Sinha, S., Das, H., & Pydah, A. (Eds.) (2019). *Multilingual education in India*. Hyderabad: Early Literacy Initiative, Tata Institute of Social Sciences.

iv See, Parikh, R., & Menon, S. (2019). Using mother tongue to facilitate English language learning in low exposure setting. Retrieved from: http://eli.tiss.edu/wp-content/uploads/2017/08/ELI-Practitioner-Brief-18_Using-MT-to-Support-English-Language.pdf

v For a more complete discussion of this topic, see Sinha, S., Pydah, A., & Menon, S. (2019). Emergent liter-acy. Retrieved from: http://eli.tiss.edu/wp-content/uploads/2017/08/ELI_Practitioner-Brief-16_Emergent-Literacy.pdf

vi More ideas about creating a print-rich classroom can be found at: Pydah, A. (2019). Creating a print-rich environment in the classroom. Retrieved: http://eli.tiss.edu/wp-content/uploads/2017/08/ELI_Practioner_Brief_8_Print-rich-Environment-in-Classroom-1.pdf

vii From: Noronha, S. (2016). *Failing Meena* (Unpublished M.Phil dissertation). Hyderabad: Tata Institute of Social Sciences.

viii For more ideas on supporting children's writing, see Sinha, S., & Menon, S. (2019). Supporting children's writing in early grades. Retrieved: http://eli.tiss.edu/wp-content/uploads/2017/08/Supporting-Childrens-Writing-in-Early-Grades_Practitioner-Brief_11.pdf; and Pydah, A. (2019). Children's writing: Creating books in the classroom. Retrieved: http://eli.tiss.edu/wp-content/uploads/2017/08/Creating_Books_in_the_Classroom_ELI_Handout_7.pdf

ಆಕರಗಳು ಮತ್ತು ಹೆಚ್ಚಿನ ಓದಿಗಾಗಿ

Ashton-Warner, S. (1963/1986). Teacher. New York: Simon and Schuster.

Cummins, J. (2001). *Bilingual children's mother tongue: Why is it important to education?* 15-20.

Gee, J. (2003). *What videogames have to teach us about language and literacy*. New York: Palgrave, Macmillan.

Jhingran, D. (2009). Hundreds of home languages in the country and many in most classrooms – Coping with diversity in primary education in India. In T., Skutnabb- Kangas, R., Phillipson, A. K., Mohanty & M., Panda (Eds.), *Social justice through multilingual education*, (pp. 250–267). Bristol: Multilingual Matters.



ಶೈಲಜಾ ಮೆನನ್ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಭಾಷೆಗಳು, ಸಾಕ್ಷರತೆ ಮತ್ತು ಮಕ್ಕಳ ಸಾಹಿತ್ಯದ ವಿಷಯಗಳಲ್ಲಿ ಬೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೆ ಮುಂಚೆ ಅವರು ಹೈದರಾಬಾದ್‌ನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್‌ನಲ್ಲಿ ಆರಂಭಿಕ ಸಾಕ್ಷರತೆ ಮುಂದೊಡಗು ಮತ್ತು ಮಹಾರಾಷ್ಟ್ರ ಹಾಗೂ ಕರ್ನಾಟಕದ ಲಿಟರೆಸಿ ರಿಸರ್ಚ್ ಇನ್ ಇಂಡಿಯನ್ ಲಾಂಗ್ವೇಜಸ್‌ನ (LiRIL) ದೀರ್ಘಕಾಲಾವಧಿ ಪ್ರಾಜೆಕ್ಟ್‌ನ ಮುಂದಾಳತ್ವ ವಹಿಸಿದ್ದರು. ಶೈಲಜಾರವರು ದ್ವಿಭಾಷಾ ಮಕ್ಕಳ ಸಾಹಿತ್ಯ ಹಬ್ಬ 'ಕಥಾವನ'ದ ಸ್ಥಾಪಕ ನಿರೂಪಕಿ. ಅವರು ಹಿಂದೂ ಸಾಹಿತ್ಯದ ಅಜೀವ ಪ್ರಶಸ್ತಿಯ ಮಕ್ಕಳ ಸಾಹಿತ್ಯದ (2016–18) ಮತ್ತು ಸರ್ ರತನ್ ಟಾಟಾ ಟ್ರಸ್ಟ್‌ನ ಬಿಗ್ ಲಿಟಲ್ ಬುಕ್ ಅವಾರ್ಡ್‌ನ (2016–18) ತೀರ್ಪುಗಾರರಾಗಿದ್ದರು. ಶೈಲಜಾ ಅವರು ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ತಮ್ಮ ಪಿಹೆಚ್‌ಡಿ ಪದವಿಯನ್ನು ಮುಗಿಸಿದರು ಮತ್ತು ಕೊಲರೆಡೊ ವಿಶ್ವವಿದ್ಯಾಲಯದಲ್ಲಿ ಬೋಧನೆ ಮಾಡಿದರು. ಅವರ ಪ್ರಕಟಣೆಗಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವರು ಮಕ್ಕಳು, ಶಿಕ್ಷಕರು ಮತ್ತು ಶಿಕ್ಷಕ ಶಿಕ್ಷಣತಜ್ಞರಿಗೆಸಾಹಿತ್ಯ, ಭಾಷೆ ಮತ್ತು ಸಾಕ್ಷರತೆಯನ್ನು ನಿರಂತರವಾಗಿ ಕಲಿಸುವಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದಾರೆ. ಅವರನ್ನು shailaja.menon@apu.edu.inನಲ್ಲಿ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ ಬಿ ಎನ್** । ಪರಿಶೀಲನೆ: **ಲತಾ ಕೆ ಸಿ**